**OS.No.**14/2021 **PW**-1

**ದಿನಾಂಕಃ 27.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು 1 ಮತ್ತು 2 ನೇ ಪ್ರತಿವಾದಿಯ ಪರ ಶ್ರೀ. ಎಂ ಈ ಎಸ್ .**

**ವಕೀಲರಿಂದಃ**

ನಾನು ನೀರಾವರಿ ಇಲಾಖೆಯಲ್ಲಿ ಎಫ್ ಡಿ ಎ ಆಗಿ ಕೆಲಸ ಮಾಡುತ್ತಿದ್ದೇನೆ. ಸುಮಾರು 7 ವರ್ಷಗಳ ಕಾಲ ನಾನು ಡೇಲಿ ವೇಜಸ್ ಮೇಲೆ ಕೆಲಸ ಮಾಡಿ ದಿಃ 03.12.1994 ರಂದು ಖಾಯಂ ಆಗಿದ್ದು, ಏಜ್ ಬಾರ್ ಆಗಿದೆ ಎಂದು ಆದೇಶವನ್ನು 1997 ಫೆಬ್ರವರಿಯಲ್ಲಿ ಕೊಟ್ಟಿರುತ್ತಾರೆ. ದಿಃ 03.12.1994 ರ ವರೆಗೆ ಮಾತ್ರ ಕೇಲಿ ವೇಜಸ್ ಪ್ರಕಾರ ಸಂಬಳ ಕೊಟ್ಟಿರುತ್ತಾರೆ. ನಿಮ್ಮನ್ನು ಕೆಲಸದಿಂದ ಯಾವತ್ತಾದ್ದರೂ ತೆಗೆದಿದ್ದರಾ ಎಂದರೆ ಸಾಕ್ಷಿ ತೆಗೆದಿರಲಿಲ್ಲ ಏಜ್ ಬಾರ್ ಆಗಿದೆ ಎಂದರ ಸರ್ಕಾರಕ್ಕೆ ಅರ್ಜಿ ಕೊಟ್ಟಿದ್ದರೂ ಆದರೆ ಸರ್ಕಾರದವರು ನಮ್ಮ ನೌಕಾರಿಯನ್ನು ಖಾಯಂ ಗೊಳಿಸಬೇಕು ಎಂದು ಅದೇಶ ಮಾಡಿದ್ದರಿಂದ ದಿಃ 03.12.1994 ರಿಂದಲೇ ಅರಿಯರ್ಸ್ ಕೊಟ್ಟಿರುತ್ತಾರೆ ಎದು ನುಡಿಯುತ್ತಾರೆ. ನಾನು ಟರ್ಮಿನೇಟ್ ಆದ ಅವಧಿಯಲ್ಲಿ ನನಗೆ ಸಂಬಳ ಕೊಟ್ಟಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿದು ನಂತರ, ಏಜ್ ಬಾರ್ ಆಗಿದೆ ಎಂದು ಸರ್ಕಾರಕ್ಕೆ ಅರ್ಜಿ ಕೊಟ್ಟಿದ್ದರಿಂದ 1996 ರಿಂದ 1997 ರ ವರೆಗೂ ಒಂದು ವರ್ಷ ಕೊಟ್ಟಿಲ್ಲಿಲ್ಲ, ಆಮೇಲೆ ಕನ್ಫರ್ಮ್ ಆದ ನಂತರ 03.12.1994 ರಿಂದ ಬೇಸಿಕ್ ಗೆ ಅನುಗುಣವಾಗಿ ಅರಿಯರ್ಸ್ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ಅರಿಯರ್ಸ್ ಅನ್ನು 1997 ರಂದು ಕೊಟ್ಟಿರುತ್ತಾರೆ. ನಾನು ಶಿರಸಿಯಲ್ಲಿ ಕೆಲಸ ಮಾಡುತ್ತಿದ್ದೆ.

ಶಿರಸಿಯಲ್ಲಿ ನಾನು ಬಾಡಿಗೆ ಮನೆಯಲ್ಲಿ ಇದ್ದೆ ಎಂದರೆ ಹೌದು. ಶಿರಸಿಯಲ್ಲಿ ನನ್ನ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದು ಸಾಕ್ಷಿ ನಮ್ಮ ಮಕ್ಕಳ ಜೊತೆಗೆ ನನ್ನ ಅಣ್ಣನ ಮಗಳು ಜ್ಯೋತಿಯೂ ಸಹ 8 ನೇ ತರಗತಿಯನ್ನು ಶಿರಸಿಯಲ್ಲಿ ಓದುತ್ತಿದ್ದಳು ಎಂದು ನುಡಿಯುತ್ತಾರೆ.

**OS.No.**14/2021 **PW**-1

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.